ಫೋಟೊ:
ಕಲೀಮ್ ಉಲ್ಲಾ



ಹಾವುಗಳು ಅವುಗಳ ಬಾಯಿಯ ಗಾತ್ರಕ್ಕಿಂತ 4 ಪಟ್ಟು ಹೆಚ್ಚಿನ ಗಾತ್ರದಲ್ಲಿ ಬಾಯಿ ತೆರೆಯುತ್ತವೆ ಮತ್ತು ಕೆಲವೊಮ್ಮೆ ಬೇಟೆ ನುಂಗಲು 150 ಡಿಗ್ರಿಯಷ್ಟು ಬಾಯಿ ತೆರೆಯುತ್ತವೆ.

ಹಾವುಗಳ ಪ್ರಿಯವಾದ ಆಹಾರ ಮತ್ತೊಂದು ಹಾವು. ಇವು ಸ್ವಜಾತಿ ಭಕ್ಷಕಗಳು. ಹಾವುಗಳು ನುಣುಪಾಗಿದ್ದು, ಸುಲಭವಾಗಿ ನುಂಗಬಹುದಾದ ಪ್ರಾಣಿಗಳು.



ಅತ್ಯಂತ ಭಾರದ ಹಸುರು ಅನಕೊಂಡ ಹಾವು 250 ಕಿಲೋ ತೂಗಿದರೆ, ಅತ್ಯಂತ ಹಗುರಾದ ಬಾರ್ಬಡೋಸ್ ಹಾವು ಅರ್ಧ ಗ್ರಾಂ ತೂಗುತ್ತದೆ.



ಹಾಂಗೋಸ್ ಹಾವುಗಳು ಭಯವಾದಾಗ ಸತ್ತಂತೆ ನಟಿಸುತ್ತವೆ ಮತ್ತು ದುರ್ನಾತ ಸೂಸುತ್ತವೆ. ಸತ್ತು ಹೋದ ದುರ್ನಾತದ ವಸ್ತುಗಳನ್ನು ತಿನ್ನಲು ಇತರ ಪ್ರಾಣಿಗಳು ಇಷ್ಟಪಡುವುದಿಲ್ಲ.

ಕ್ರೈಸೋಫ್ಲಿಯಾ ಜಾತಿಗೆ ಸೇರಿದ ಕೆಲವೊಂದು ಹಾವುಗಳು ಗಾಳಿಯಲ್ಲಿ ಲಘುವಾಗಿ ಹಾರಬಲ್ಲವು, ಹಾರುಬೆಕ್ಕುಗಳು ಹಾರುವ ರೀತಿಯಲ್ಲಿ.



ಅತ್ಯಂತ ಉದ್ದದ ಹೆಬ್ಬಾವು 10 ಮೀಟರ್ ಇದ್ದರೆ, ಅತ್ಯಂತ ಗಿಡ್ಡ ವಯಸ್ಕ ಬಾರ್ಬಡೋಸ್ ಹಾವು 10 ಸೆಂ.ಮೀ. ಇರುತ್ತದೆ.

ಬ್ರೆಜಿಲ್‌ನಲ್ಲಿ 'ಹಾವುಗಳ ದ್ವೀಪ'ವಿದೆ. ಅದರ ಪ್ರತಿ ಚದರ ಮೀಟರಿನಲ್ಲಿ 5 ಹಾವುಗಳಿವೆ.

ಹಾವುಗಳ ಶರೀರದಲ್ಲಿ 900ರಿಂದ 1200 ಎಲುಬುಗಳು ಇರುತ್ತವೆ. ಮನುಷ್ಯನಲ್ಲಿ ಎಲುಬುಗಳ ಸಂಖ್ಯೆ 206.





ವೈಪರ್ ಜಾತಿಗೆ ಸೇರಿದ ಹಾವುಗಳಿಗೆ ಕೊಂಬು ಇದ್ದಂತೆ ಭಾಸವಾಗುತ್ತದೆ. ಇದು ಅವುಗಳ ಕಣ್ಣನ್ನು ರಕ್ಷಿಸಲು ಇರುವ ವ್ಯವಸ್ಥೆ.

## ಹಾವಿನ ಲೋಕದ ಕೌತುಕಗಳು

- ಹಾವುಗಳು ಸೂರ್ಯನ ಬೆಳಕು ಮತ್ತು ಶಾಖ ಇರದೇ ಬದುಕಲಾರವು. ಅವುಗಳ ಜೀರ್ಣಕ್ರಿಯೆಗೆ ಸೂರ್ಯನ ಶಾಖ ಬೇಕೇಬೇಕು.
- ಹಾವುಗಳಿಗೆ ಬಣ್ಣ ಗುರುತಿಸುವ ಶಕ್ತಿ ಇಲ್ಲ. ಚಲಿಸದೇ ನಿಂತರೆ ಅವು ಪ್ರಾಣಿಯನ್ನೂ ಮರ ಎಂದುಕೊಳ್ಳುತ್ತವೆ.
- ಹಾವುಗಳಿಗೆ ಕಾಲುಗಳಿಲ್ಲ. ಆದರೆ ಕಾಲುಗಳ ಶೇಷ ಇದೆ.
- ಹಾವುಗಳು ಕಟ್ಟಾ ಮಾಂಸಾಹಾರಿಗಳು. ಸಸ್ಯ ಅಥವಾ ಹಾಲನ್ನು ಅವು ಸೇವಿಸಿದ ನಿದರ್ಶನವಿಲ್ಲ.
- ಹಾವುಗಳಿಗೆ ಚಲಿಸುವಂತಹ ಕಣ್ಣು ಗುಡ್ಡೆಗಳಿಲ್ಲ.
- ಹಾವುಗಳು ಅವುಗಳ ಬೇಟೆಯನ್ನು ಇಡಿಯಾಗಿ ನುಂಗುತ್ತವೆ. ಅಗಿದು ತಿನ್ನುವುದಿಲ್ಲ. ಆದರೆ ಮಾಂಗ್ರೋವ್ ಜಾತಿಗೆ ಸೇರಿದ ಹಾವು ಏಡಿಗಳನ್ನು ಶರೀರದ ಬಲ ಉಪಯೋಗಿಸಿ ತುಂಡುತುಂಡು ಮಾಡಿ ತಿನ್ನುತ್ತದೆ.
- ಹಾವುಗಳಿಗೆ ಒಂದೇ ಶ್ವಾಸಕೋಶವಿದ್ದು, ಅದು ಎಡಭಾಗದಲ್ಲಿದೆ.
- ಹಾವುಗಳು ಅವುಗಳ ಮಾಂಸಖಂಡಗಳ ಸಂಕುಚನ ಮತ್ತು ವಿಕಸನದಿಂದ ನಾಲ್ಕು ವಿವಿಧ ದಿಕ್ಕಿನಲ್ಲಿ ಚಲಿಸುವ ಸಾಮರ್ಥ್ಯ ಹೊಂದಿರುತ್ತವೆ.
- ಕೆಲಬಾರ್ ಹೆಬ್ಬಾವಿನ ಚರ್ಮ ಇತರ ಹಾವುಗಳ ಚರ್ಮಕ್ಕಿಂತ 15 ಪಟ್ಟು ದಪ್ಪವಾಗಿರುತ್ತದೆ.
- ಹಾವುಗಳ ಬೆಳವಣಿಗೆ ಒಂದು ಹಂತಕ್ಕೆ ನಿಲ್ಲದೆ ಸದಾ ಬೆಳೆಯುತ್ತಾ ಇರುತ್ತದೆ. ವಯಸ್ಸಾದ ಹಾಗೆ ಈ ಪ್ರಕ್ರಿಯೆಯ ವೇಗ ಕಡಿಮೆಯಾಗುತ್ತದೆ ಅಷ್ಟೆ.
- ಹಾವುಗಳು ದಿನಕ್ಕೆ 16 ಗಂಟೆ ನಿದ್ರೆ ಮಾಡುತ್ತವೆ. ಒಮ್ಮೊಮ್ಮೆ ಇತರ ಸರೀಸೃಪಗಳ ಹಾಗೆ ಶೀತನಿದ್ರೆಗೆ ಜಾರುತ್ತವೆ.
- ಸಮುದ್ರ ಅಥವಾ ನದಿಯ ಸಿಹಿ ನೀರಿನಲ್ಲಿ ವಾಸಿಸುವ ಹಾವುಗಳು ಸಹ ನೀರಿನಲ್ಲಿ ಉಸಿರಾಡಲಾರವು. ಅವು ಪ್ರತಿ 30 ನಿಮಿಷಕ್ಕೆ ಮೇಲೆ ಬಂದು ಉಸಿರು ತೆಗೆದುಕೊಳ್ಳುತ್ತವೆ.